**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 01 ಬಿಯುಡಿ 2015

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:22-6-2015.

ಅಧಿಕೃತ ಜ್ಞಾಪನ

ವಿಷಯ: 2015-16ನೇ ಅರೆಕಾಲಿಕ ಉಪನ್ಯಾಸಕರು/ಅರೆಕುಶಲದಾಳು/ಅಕುಶಲದಾಳುಗಳಿಗೆ **ಭತ್ಯೆಗಾಗಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನ ಬಿಡುಗಡೆ ಬಗ್ಗೆ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮತ್ತು ಸರ್ಕಾರಿ ಕಿರಿಯ ತಾಣತ್ರಿಕ ಶಾಲೆಗಳಲ್ಲಿ ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿನ ಖಾಲಿ ಹುದ್ದೆಗಳೆದುರು ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರು ಹಾಗೂ ಅರೆಕುಶಲದಾಳು/ಅಕುಶಲದಾಳುಗಳಿಗೆ 2012-13, 2013-14 ಹಾಗೂ 2014-15 ನೇ ಸಾಲಿಗೆ ವಿತರಿಸಬೇಕಾಗಿರುವ ಬಾಕಿ ಭತ್ಯೆಯನ್ನು ಕ್ರಮವಾಗಿ ಲೆಕ್ಕ ಶೀರ್ಷಿಕೆ 2203-00-105-0-01-051 (ಯೋಜನೇತರ) ಹಾಗೂ 2203-00-103-0-01-051 (ಯೋಜನೇತರ) ರಡಿಯಲ್ಲಿ ಭರಿಸಲು ಈಗಾಗಲೇ ಈ ಕಛೇರಿಯಿಂದ ಅನುಮೋದನೆ ನೀಡಿ ಆದೇಶಿಸಲಾಗಿದೆ.

ಆದರೇ ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಆಯವ್ಯಯದ ಕೊರತೆಯಿಂದಾಗಿ ಪೂರ್ಣ ಪ್ರಮಾಣದ ಅನುದಾನದವನ್ನು ಬಿಡುಗಡೆ ಮಾಡಲು ಸಾದ್ಯವಾಗುತ್ತಿಲ್ಲ. ಆದ್ದರಿಂದ ಪಾಠ ಪ್ರವಚನ ಸುಸೂತ್ರವಾಗಿ ಮುಂದುವರೆಯಲು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2012-13, 2013-14 ಹಾಗೂ 2014-15 ನೇ ಸಾಲಿಗೆ ವಿತರಿಸಬೇಕಾಗಿರುವ ಬಾಕಿ ಭತ್ಯೆಯನ್ನು **2015-16 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಲೆಕ್ಕ ಶೀರ್ಷಿಕೆ 2203-00-105-0-01(ಯೋಜನೇತರ)ರಡಿಯಲ್ಲಿ ಭರಿಸಲು ಈ ಮೂಲಕ ಆದೇಶಿಸಲಾಗಿದೆ ಅದೇ ರೀತಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ 2015-16 ನೇ ಸಾಲಿನ ಲೆಕ್ಕ ಶೀರ್ಷಿಕೆ 2203-00-103-0-01(ಯೋಜನೇತರ)ರಡಿಯಲ್ಲಿ ಭರಿಸಲು ಈ ಮೂಲಕ ಆದೇಶಿಸಲಾಗಿದೆ.**

ವಿಷಯವು ಅತೀ ಜರೂರಾಗಿದ್ದು ಕೂಡಲೇ ಬಿಲ್ಲುಗಳನ್ನು ತಯಾರಿಸಿ ಖಜಾನೆಗೆ ಸಲ್ಲಿಸಲು ತಿಳಿಸಲಾಗಿದೆ ಹಾಗೂ ಬಾಕಿ ಇರುವ ಭತ್ಯೆಯನ್ನು ವಿತರಿಸಿದ ಬಗ್ಗೆ ವಿವರಗಳನ್ನು ಈ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ನಿರ್ದೇಶಕರು

ಯೋಜನೇತರ ಅಡಿಯಲ್ಲಿನ ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1.ಆಡಳಿತಾಧಿಕಾರಿಯವರು,ನಿರ್ದೇಶನಾಲಯ.

2.ರಿಜಿಸ್ಟ್ರಾರ್ (ಆಡಳಿತ),ನಿರ್ದೇಶನಾಲಯ.

3.ಇಎಸ್‌ಟಿ(2ಬಿ) ಹಾಗೂ ಎಂಎಸ್‌ಸಿ ವಿಭಾಗಗಳು,ನಿರ್ದೇಶನಾಲಯ.